November 2007

# ಮನಿ ಕುಮಾರ್

## ಮತ್ತು ಆರ್ಥಿಕ ನೀತಿ



ಹಣಕಾಸಿನ ಶಿಕ್ಷಣ ಸರಣಿ

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in




## ಆರ್ಥಿಕ ನೀತಿಯ ಬಗ್ಗೆ ಅರಿವು!

ನನ್ನ ಬಳಿ ಒಂದು ಬಹುದೊಡ್ಡ ಕೆಲಸವಿದೆ. ಆದರೆ ಬಹಳಷ್ಟು ಜನರಿಗೆ ನಾನು ಏನು ಮಾಡುತ್ತಿದ್ದೇನೆ ಎಂದು ತಮಗೆ ತಿಳಿದಿಲ್ಲ. ಬಹಳಷ್ಟು ಮಂದಿಯ ಪಾಲಿಗೆ ಆರ್‌ಬಿಐ ಅಂದರೆ ಒಂದು ಸರಕಾರಿ ಸಂಸ್ಥೆ, ನಮಗೆ ಆದರ ಜೊತೆ ಯಾವ ಸಂಬಂಧವೂ ಇಲ್ಲ – ಎಂಬುದು. ಆದರೆ ಅದು ನಿಜವಾಗಿಯೂ ಹಾಗಲ್ಲ. ಆರ್‌ಬಿಐ ಯಲ್ಲಿ ಕೈಗೊಳ್ಳುವ ಪ್ರತಿಯೊಂದು ಕ್ರಿಯೆ ಇಡೀ ದೇಶದ ಮೇಲೆ ಪ್ರಭಾವ ಬೀರುವುಮ. ಬಡ ರೈತನಿಂದ ಹಿಡಿದು ಶ್ರೀಮಂತ ಉದ್ಯಮಿಗಳ ವರೆಗೆ ಆದರ ಪರಿಣಾಮ ಕಾಣುವುದು. ಒಂದು ತಪ್ಪು ಹೆಜ್ಜೆ ತೀವ್ರ ಪರಿಣಾಮಕ್ಕೆಡೆ ಮಾಡಿಕೊಡಬಹುದು . ಈಗ ಇದನ್ನು ನೀವೇ ಊಹಿಸಿಕೊಳ್ಳಬಹುದು, ಇದು ಅತ್ಯಂತ ಆಸಕ್ತಿಯ ಕೆಲಸ ಆಗಿರುವುದರ ಜೊತೆ ಅನೇಕ ಜವಾಬ್ದಾರಿಗಳನ್ನೂ ಒಳಗೊಂಡಿದೆ. ಈಗ ನೀವು ಇದರ ಬಗ್ಗೆ ಹೆಚ್ಚು ತಿಳಿದುಕೊಳ್ಳ ಬಯಸುತ್ತೀರಾದರೆ, ಆರಾಮವಾಗಿ ಕೂಳಿತುಕೊಳ್ಳಿ, ಓದಿರಿ ಮತ್ತು ಆನಂದಿಸಿರಿ!



## ಆರ್‌ಬಿಐ ಬಗ್ಗೆ ಕಿರು -ಮಾಹಿತಿ !

ಭಾರತೀಯ ರಿಸರ್ವ್ ಬ್ಯಾಂಕು ಎಪ್ರೀಲ್ 1, 1935 ರಲ್ಲಿ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಆ್ಯಕ್ಟ್ 1934 ರ ಅನ್ವಯ ಸ್ಥಾಪನೆಗೊಂಡಿತು. ಇದರ ಕೇಂದ್ರ ಕಚೇರಿ ಆರಂಭದಲ್ಲಿ ಕಲ್ಕತ್ತಾದಲ್ಲಿದ್ದು ಅನಂತರ 1937 ರಲ್ಲಿ ಶಾಶ್ವತವಾಗಿ ಮುಂಬಯಿಗೆ ಸ್ಥಳಾಂತರಗೊಂಡಿತು. ಆರಂಭದಲ್ಲಿ ಇದು ಖಾಸಗಿ ಒಡೆತನದ್ದಾಗಿದ್ದುದ್ದಲ್ಲಿದ್ದು ನಂತರ 1949 ರಲ್ಲಿ ರಾಷ್ಟ್ರೀಕೃತಗೊಂಡು ಭಾರತ ಸರಕಾರದ ಸಂಪೂರ್ಣನ ಆಡಳಿತಕ್ಕೆ ಒಳಪಟ್ಟಿತು.



ಒಂದು ವರ್ಗದಲ್ಲಿ ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಕಷ್ಟಪಟ್ಟು ಪ್ರಯತ್ನಿಸುತ್ತಿದ್ದಾರೆ.
ಅರ್ಥಶಾಸ್ತ್ರ
• ಆರ್ಥಿಕ ನೀತಿ ಯೋಜನೆ
• ಬೆಲೆಗಳ ಏರಿಳಿತಗಳು
• ಆರ್ಥಿಕ ಸ್ಥಿರತೆ
• ಕ್ಷೇಮಾ
ಇವತ್ತು ನಿಮಗೊಂದು ಆಶ್ಚರ್ಯ ಎದುರಾಗಲಿದೆ. ಈಗ ಮನೀಕುಮಾರರನ್ನು ಬರಮಾಡಿಕೊಳ್ಳಿ,
ಹಾಯ್ ಎಲ್ಲರಿಗೂ!
ಮನಿಕುಮಾರರಿಗೆ ಸ್ವಾಗತ, ನಾನು ನಿಮ್ಮನ್ನು ಈ ತರಗತಿಗೆ ಆರ್ಥಿಕ ನೀತಿಯ ಬಗ್ಗೆ ತಿಳಿಸಲು ಆಹ್ವಾನಿಸಿದ್ದೇನೆ.
ನಾನು ಅವರಿಗೆ ಆರ್ಥಿಕ ನೀತಿಯ ಮೂರು ಮೂಲ ಉದ್ದೇಶಗಳನ್ನು ತಿಳಿಸಿದ್ದೇನೆ. ಬೆಲೆ ಏರಿಕೆಯನ್ನು ನಿಯಂತ್ರಿಸುವುದು, ಅಭಿವೃದ್ದಿಗೆ ಉತ್ತೇಜನ ಮತ್ತು ಹಣಕಾಸಿನ ಸ್ಥಿರತೆ.
ಇದೆಲ್ಲವೂ ಸಂಕೀರ್ಣವಾಗಿದೆ. ಎಲ್ಲರಿಗೂ ಸಾಕಾಗುವಷ್ಟು ಹಣ ನಮ್ಮ ಬಳಿ ಏಕಿಲ್ಲ? ಎಲ್ಲರೂ ಸುಖವಾಗಿರೊದು ಯಾಕೆ ಆಗುತ್ತಿಲ್ಲ ?
ಯಾಕಾಗೋದಿಲ್ಲ ?
ಏನು ನಿಮ್ಮ ಸಮಸ್ಯೆ ?
ಓಹ್ ಇಲ್ಲ! ಸಾಧ್ಯವಿಲ್ಲ!
ಸರಿ ಸರಿ ಅಂದರೆ ಸಾಕಷ್ಟು ಹಣ ಇದ್ದರೆ, ಎಲ್ಲವೂ ಸರಿಯಾಗುತ್ತದೆ ಎಂದು ನಿನಗೆ ಅನಿಸುತ್ತದೆಯೇನು ?


...ಸರಿ ಹಾಗಾದರೆ, ನಾವು ವರ್ಗ ಪ್ರವಾಸಕ್ಕೆ ಹೋಗೋಣ !
ಅವನು ತನ್ನ ಕೈಯನ್ನೆತ್ತಿ ಗರಗರನೆ ತಿರುಗಿಸುತ್ತಾನೆ ಮತ್ತು ಅವರು ಒಂದು ಇಷ್ಟ ಬಂದಷ್ಟು ಹೊಸ ವಿಶ್ವವನ್ನು ಪ್ರವೇಶಿಸುತ್ತಾರೆ !
GAME
THEATER
SREAME
ಸುಸ್ವಾಗತ ಎಲ್ಲೆಲ್ಲೂ ಹಣ ತುಂಬಿರುವ ಈ ಜಗತ್ತಿಗೆ. ಈಗ ನಿಮಗೆ ಇಷ್ಟಬಂದಷ್ಟು ಹಣ ತೆಗೆದುಕೊಳ್ಳಿರಿ ಮತ್ತು ಇಷ್ಟ ಬಂದದ್ದನ್ನು ಮಾಡಿರಿ. ಈಗ ನನಗೆ ಹೇಳಿ, ನಿಮಗೆ ಎಷ್ಟು ಹಣ ಬೇಕು ?
500 ರೂಪಾಯಿಗಳು ! ನಮಗೆ ಬೇಕಿರುವುದೆಲ್ಲವನ್ನೂ ನಾವೀಗ ಖರೀದಿಸಬಹುದು !
ಹಾಗೇ ಆಗಲಿ !
ವಿದ್ಯಾರ್ಥಿಗಳು ತಮ್ಮ ಹಣವನ್ನು ಖುಷಿಯಿಂದ ಖರ್ಚುಮಾಡುತ್ತಾರೆ.
VIDEO GA


ಮಕ್ಕಳು ಆಟವಾಡಲು ಸಾಲಾಗಿ ನಿಂತಿರುವರು. ಒಂದು ಆಟಕ್ಕೆ ರೂ.100, ಇದು ಎಲ್ಲರಿಗೂ ಎಟುಕಬಲ್ಲಂಥದು.
GAMES
ರೂ. 100.
ಆದರೆ ನಿಧಾನವಾಗಿ ಇತರ ಮಕ್ಕಳು ಸಾಲನ್ನು ಸೇರಿಕೊಳ್ಳುತ್ತಾರೆ.
ಮತ್ತು ಬೇಡಿಕೆ ಹೆಚ್ಚಿದಂತೆ,ಬೆಲೆ ಕೂಡ ಹೆಚ್ಚುವುದು...
ರೂ.150/-
ರೂ.200/-
ರೂ.300/-
ಕೆಲವರಿಗೆ ಇದು ಎಟುಕಬಹುದು. ಬಹಳಷ್ಟು ಮಂದಿಗೆ ಎಟುಕಲಿಕ್ಕಿಲ್ಲ.
ನಾವು ಏನು ಮಾಡಬಯಸುತ್ತೇವೋ ಅದನ್ನು ಮಾಡುವುದು ಸಾಧ್ಯವಿಲ್ಲವಾದರೆ ಹಣ ಇದ್ದು ಏನು ಪ್ರಯೋಜನ ?
ಹೌದು, ಅವರು ಹೆಚ್ಚು ಕಂಪ್ಯೂಟರ್ ಆಟಿಕೆ ಸಾಮಾನುಗಳನ್ನು ಏಕೆ ಇರಿಸಿಕೊಳ್ಳ ಬಾರದು.. ಅದರಿಂದ ನಾವೆಲ್ಲರೂ ಆಡುವಂತಾಗಬಹುದು ?


ಆದರೆ ಸ್ಥಳ ಎಲ್ಲಿದೆ ? ನಿಂತುಕೊಳ್ಳಲೂ ಸ್ಥಳ ಸಾಲದ. ಇಷ್ಟುಸಣ್ಣ ಜಾಗದಲ್ಲಿ ಇಷ್ಟೊಂದು ಸಾಮಾನುಗಳನ್ನು ಇರಿಸುವುದಾದರೂ ಎಲ್ಲಿ ?
ಮನೀಕುಮಾರ್ !!!
ಮನೀಕುಮಾರ್ !!!
ಮನೀಕುಮಾರ್ !!!
ಮನೀಕುಮಾರ್ ಮಿಂಚಿನಂತೆ ಬರುತ್ತಾನೆ !
ಇಷ್ಟೊಂದು ಹಣವಿದ್ದರೂ, ನಾವು ಮಾಡಬಯಸುವುದನ್ನು ಮಾಡುವುದು ಏಕೆ ಸಾಧ್ಯವಾಗುವುದಿಲ್ಲ ? ಸಾಕಷ್ಟು ವಸ್ತುಗಳು ಯಾಕೆಉಪಲಬ್ದವಿಲ್ಲ?
ಹೇರಳ ಹಣ ಇದ್ದು ವಸ್ತುಗಳು ಕಡಿಮೆ ಇದ್ದಾಗ, ಇದು ಆಗಿಯೇ ಆಗುತ್ತದೆ. ಇದನ್ನು ಹಣದುಬ್ಬರ ಎನ್ನುತ್ತಾರೆ!
ಹಣದುಬ್ಬರ ?
ಹೆಚ್ಚು ಹಣ ಕಡಿಮೆ ವಸ್ತುಗಳನ್ನು ಹಿಂಬಾಲಿಸುವಾಗ ವಸ್ತುಗಳ ಬೆಲೆ ಏರುತ್ತದೆ. ಅದೇ ಹಣದುಬ್ಬರ. ಇದರಿಂದ ಎಲ್ಲರಿಗೂ ತೊಂದರೆ ಆಗುತ್ತದೆಯಾದರೂ, ಬಡವರಿಗೆ ಹೆಚ್ಚು ಕಷ್ಟವಾಗುವುದು.
ಅದು ಯಾಕೆ ?
ಏಕೆಂದರೆ, ಬಡವರಿಗೆ ಸುರಕ್ಷೆ ಇರುವುದಿಲ್ಲ, ಅವರ ದೈನಂದಿನ ಆದಾಯ ಕಡಿಮೆ. ಆದುದರಿಂದ ಆಪತ್ಕಾಲಕ್ಕಾಗಿ ಅವರು ಹೆಚ್ಚು ಉಳಿತಾಯ ಮಾಡಲಾರರು.
ಆದಕ್ಕಾಗಿ ನೀವು ಏನಾದರೂ ಮಾಡಲಾರಿರಾ?
ಖಂಡಿತ, ನಾನು ಮಾಡಬಲ್ಲೆ, ಬನ್ನಿ, ನಾನು ನಿಮಗೊಂದು ತೋರಿಸುತ್ತೇನೆ !



ಆರ್‌ಬಿಐ ಹೆಡ್‌ಕ್ವಾರ್ಟರ್ಸ್‌ನಲ್ಲಿರುವ ತನ್ನ ಕಂಟ್ರೋಲ್ ರೂಮ್‌ಗೆ ಅವರನ್ನು ಕರೆದುಕೊಂಡು ಹೋಗುತ್ತಾನೆ.
भारतीय रिज़र्व बैंक
RESERVE BANK OF INDIA
ಆರ್‌ಬಿಐಯಲ್ಲಿ ನಾವು ಮಾಡುವುದು ಇದನ್ನೇ !
ಅವನು ಬಡ್ಡಿ ದರಗಳನ್ನು ಮೇಲೇರಿಸುತ್ತಿರುವಾಗ...
INTEREST RATE
...ಈಗ ಸ್ಕ್ರೀನಿನಲ್ಲಿ ಕಾಣಿಸುವುದು, ರೂಪಾಯಿಯ ಹರಿವು ಬ್ಯಾಂಕ್‌ನಿಂದ ಮಾರುಕಟ್ಟೆಗೆ ನಿಧಾನವಾಗಿ ಹರಿದಾಗ ಹಣ ದುಬರಿಯಾಗುತ್ತದೆ ಮತ್ತು ಜನ ಬ್ಯಾಂಕಿನಿಂದ ಸಾಲ ಪಡೆಯುವುದು ಕಡಿಮೆಯಾಗುತ್ತದೆ.
MARKE
ಆಗ ಅವನು ಬೇರೆ ಸ್ಲೈಡರ್‌ಗಳನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಾನೆ, ಮಾರುಕಟ್ಟೆಯಿಂದ ಅಧಿಕ ಹಣ ಅವನ ಮಶೀನಿನಿಂದ  ಹೀರಿಕೊಳ್ಳಲ್ಪಡುತ್ತದೆ.
LIQUIDITY
ಸ್ಕ್ರೀನಿನಲ್ಲಿ ವೀಡಿಯೋ – ಗೇಮ್ ಪಾರ್ಲರ್ ಕಾಣಿಸುತ್ತದೆ. ವೀಡಿಯೋಗೇಮ್ ಕನ್ಸೋಲ್‌ನ ಲೈನ್ ನಿಧಾನವಾಗಿ ಕೆಳಗೆ ಬರುತ್ತದೆ ಮತ್ತು ಹಾಗೆಯೇ ಟಿಕೇಟ್ ಬೆಲೆಗಳು ಕೊಡ.
ರೂ.100/-
ಬೆಲೆಗಳ ಏರುವಿಕೆಯನ್ನು ಆರ್‌ಬಿಐ ಸಂಪೂರ್ಣವಾಗಿ ತಡೆಯುವುದು ಸಾಧ್ಯವಿಲ್ಲ. ಆದರೆ ಬೆಲೆಗಳ ತೀವ್ರ ಏರಿಳಿತವನ್ನು ಅದುತಡೆಯುವುದು ಇದರಿಂದಾಗಿ ಜನರಿಗೆ ಹೊಂದಾಣಿಕೆ ಮಾಡಲು ಸಾಕಷ್ಟುಸಮಯ ದೊರಕುತ್ತದೆ ಮತ್ತು ಭವಿಷ್ಯದ ಜಾಗ್ರತೆಗೆ ಉಳಿತಾಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.


ಅದು ಜನರಿಗೆ ಉಪಲಬ್ಧವಿರುವ ಹಣವನ್ನು ನಿಯಂತ್ರಿಸಿ ಬೆಲೆಗಳ ಸ್ಥಿರತೆಯನ್ನು ಕಾದುಕೊಳ್ಳುವುದು. ಹೆಚ್ಚು ಹಣ ಒದಗಿಸುವ ಮೂಲಕ ಅಥವಾ ಬ್ಯಾಂಕಿನಿಂದ ಹೆಚ್ಚುವರಿ ಹಣವನ್ನು ವಾಪಸು ತೆಗೆದುಕೊಳ್ಳುವ ಮೂಲಕ ಅದು ಹಣದ ನಿಯಂತ್ರಣ ಮಾಡಬಲ್ಲದು.
ಅದು ಹಣದ ಬೆಲೆ ಅಂದರೆ ಬಡ್ಡಿದರವನ್ನು ಹೆಚ್ಚು ಅಥವಾ ಕಡಿಮೆ ಮಾಡಬಹುದು; ಜನರು ಖರ್ಚು ಮಾಡುವ ಹಣದ ಮೇಲಿನ ಬಡ್ಡಿದರ ನಿಯಂತ್ರಿಸಿ ಹೀಗೆ ಮಾಡ ಬಹುದು.
ಈಗಲೂ ಅದು ಸಂಕೀರ್ಣ ಅನಿಸುತ್ತಿದೆಯೇ ?
ಇಲ್ಲ, ಮನೀಕುಮಾರ್. ಬೆಲೆಗಳ ಸ್ಥಿರತೆಯ ಬಗ್ಗೆ ನಮಗೆ ಈಗ ಅರ್ಥವಾಯಿತು.
ಮತ್ತೊಮ್ಮೆ ಶಾಲಾ ವರ್ಗದ ಒಳಗೆ.
ಈಗ, ಮಿತಿಯಿಲ್ಲದಷ್ಟು ಹಣದಿಂದ ನಿಮಗೆ ಏನೇಲ್ಲ ದೊರಕಿತು ?
ಮಿತಿಯಿಲ್ಲದಷ್ಟು ತೊಂದರೆಗಳು !!!
... ಎಲ್ಲರೂ ಗೊಳ್ಳೆಂದು ನಕ್ಕರು !!!


ಈಗ ನೀವು ಬೆಲೆ ಸ್ಥಿರತೆಯ ಬಗ್ಗೆ ಖಚಿತತೆ ಕೊಡಬಲ್ಲಿರಾ ?
ಹೌದು ! ಹಾಗೆ ಮಾಡುವುದರಿಂದ, ರಾಷ್ಟ್ರದ ಬೆಳವಣಿಗೆಯಲ್ಲಿ ಸ್ಥಿರತೆಯನ್ನು ಖಚಿತ ಪಡಿಸಿಕೊಳ್ಳುವ ಭರವಸೆ ನನ್ನದು.
ಸ್ಥಿರ ಬೆಳವಣಿಗೆ ? ಯಾಕೆ? ಭಾರತವು ವೇಗವಾಗಿ ಮತ್ತು ವಿಶಾಲವಾಗಿ ಪ್ರಗತಿ ಹೊಂದುತ್ತೀದ್ದರೆ, ನಿಮಗೇನು ತೊಂದರೆ ?
ಇಲ್ಲ, ನನಗೇನೂ ತೊಂದರೆಯಿಲ್ಲ. ಆದರೆ ಅಭಿವೃದ್ಧಿಯಲ್ಲಿ ಸ್ಥಿರತೆ ಇರದಿದ್ದರೆ, ಅದು ತೀವ್ರ ಸಮಸ್ಯೆಗಳಿಗೆ ಕಾರಣವಾಗಬಹುದು.
ಅದು ಹೇಗೆ ?
ನೀವು ಅದನ್ನು ನೋಡಬೇಕೆ ?
ಅವನು ಕೈಯನ್ನೆತ್ತಿ ಗರಗರನೆ ತಿರುಗಿಸುತ್ತಾನೆ ಮತ್ತು ಒಂದು ಹೊಸ ಲೋಕವನ್ನು ತಲುಪುತ್ತಾರೆ.
ಈ ಲೋಕವನ್ನು ಪ್ರವೇಶಿಸಿರಿ, ನೀವೇ ಇದರ ನಾಯಕರು. ಏನಾದರೂ ತೊಂದರೆ ಕಾಣಿಸಿದರೆ, ನನಗೆ ಕರೆ ನೀಡಿರಿ.
ಆರ್‌ಬಿಐನ ಕಂಟ್ರೋಲ್ ರೂಮ್‌ನಲ್ಲಿ.
ನಾ ವೀಗ ಅಧಿಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸೋಣ. ಎಲ್ಲಾ ಕಂಪನಿಗಳಿಗೆ ಉತ್ಪಾದನೆ ಹೆಚ್ಚಿಸಲು ಹೇಳಿ ಮತ್ತು ಎಲ್ಲರ ಆದಾಯವೂ ಹೆಚ್ಚಲಿ.


ಅವರುಬಟನನ್ನು ಸ್ವಿಚ್ ಆನ್ ಮಾಡುವರು, ಮತ್ತು ಕಾರ್ಪೊರೇಟ್ ಮುಖ್ಯಸ್ಥರು ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳುವರು.
ಮಹಿಳೆಯರೇ ಮತ್ತು ಮಹನೀಯರೇ, ಇಲ್ಲಿ ಕೇಳಿ ! ದೇಶವು ಅಭಿವೃದ್ದಿಯಾಗಬೇಕು ಎಂದು ನಾವು ಆಪೇಕ್ಷಿಸುತ್ತೇವೆ. ಆದಕಾರಣ ದಯವಿಟ್ಟು ನಿಮ್ಮ ಉತ್ಪಾದನೆಯನ್ನು ಹೆಚ್ಚಿಸಿರಿ.
ಆದರೆ ಹಾಗೆ ಮಾಡು ವುದಕ್ಕೆ ನಮಗೆ ಅಧಿಕ ಸಂಪನ್ಮೂಲಗಳು ಬೇಕು !
ನಿಮಗೆ ಬೇಕಿರುವಷ್ಟು ಸಂಪನ್ಮೂಲಗಳಿಂದ ಕೊಂಡೊಯ್ಯಿರಿ.
ಅವರ ಸೂಚನೆಯ ಅನುಸಾರ, ಕಾರ್ಮಿಕರು ಅವರಿಗೆ ಬೇಕಿರುವಷ್ಟು ಸಂಪನ್ಮೂಲಗಳ ಬಾಕ್ಸನ್ನು ಕೊಂಡೊಯ್ಯುವರು.
ಅಧಿಕ ಸಂಪನ್ಮೂಲಗಳಿಂದ ಫ್ಯಾಕ್ಟರಿಗಳು ಅಧಿಕ ವಸ್ತುಗಳನ್ನು ಉತ್ಪಾದಿಸುತ್ತವೆ.
ಅಂಗಡಿಗಳು ವಸ್ತುಗಳಿಂದ ತುಂಬಿಕೊಂಡಿವೆ ಮತ್ತು ಜನರ ಬಳಿ ಅದನ್ನು ಖರೀದಿಸಲು ಬೇಕಾಗುವಷ್ಟು ಹಣ ಇದೆ.



ಆಕಾಶದೆತ್ತರ ಅಭಿವೃದ್ಧಿಕ್ಕೆ !
ಅತ್ಯಧಿಕ ಉದ್ಯೋಗದ ಪ್ರಮಾಣ !
ವಿದ್ಯಾರ್ಥಿಗಳು ತಮ್ಮ ಸಫಲತೆಯನ್ನು ಸಂಭ್ರಮಿಸುತ್ತಿದ್ದಾಗ...
...ಅಲಾರ್ಮ್ ಸದ್ದು ಅವರನ್ನು ತಡೆಯುತ್ತದೆ. ಆದೇನು ಎಂದು ನೋಡಲು ಅವರು ಮುಖ್ಯ ಸ್ಕ್ರೀನಿನ ಕಡೆ ತಿರುಗುತ್ತಾರೆ
ಸಂಪನ್ಮೂಲಗಳು ಮಿತಿಗೊಂಡಿವೆ; ಉತ್ಪಾದನೆಯ ಹೆಚ್ಚಳ ಅಸಾಧ್ಯ !
ಅಧಿಕ ಉದ್ಯೋಗದ ಅರ್ಥ ಅಧಿಕ ಖರ್ಚು ಮಾಡುವ ಶಕ್ತಿ ಅಧಿಕ ಬೇಡಿಕೆಯ ಕಾರಣದಿಂದ ಉಂಟಾಗುವುದು ಹಣದುಬ್ಬರ. ಈಗ , ಹೇರಳ ಹಣಇರುವ ಜನ ಕೂಡ ವಸ್ತುಗಳನ್ನು ಖರೀದಿಸಲಾರರು!
ಮನಿಕುಮಾರ್ ಕೂಡ ಈಗ ಚಿಂತೆ ಮಾಡತೊಡಗಿದ್ದಾನೆ...ಆದರೂ ವಿದ್ಯಾರ್ಥಿಗಳು ಅವನನ್ನು ಕರೆಯ ಬಹುದೇನೋ ಎಂದು ಕಾಯುತ್ತಿದ್ದಾನೆ.



ಆಕಾಶದೆತ್ತರ ಅಭಿವೃದ್ಧಿಕ್ಕೆ !
ಅತ್ಯಧಿಕ ಉದ್ಯೋಗದ ಪ್ರಮಾಣ !
ವಿದ್ಯಾರ್ಥಿಗಳು ತಮ್ಮ ಸಫಲತೆಯನ್ನು ಸಂಭ್ರಮಿಸುತ್ತಿದ್ದಾಗ...
...ಅಲಾರ್ಮ್ ಸದ್ದು ಅವರನ್ನು ತಡೆಯುತ್ತದೆ. ಅದೇನು ಎಂದು ನೋಡಲು ಅವರು ಮುಖ್ಯ ಸ್ಕ್ರೀನಿನ ಕಡೆ ತಿರುಗುತ್ತಾರೆ
ಸಂಪನ್ಮೂಲಗಳು ಮಿತಿಗೊಂಡಿವೆ; ಉತ್ಪಾದನೆಯ ಹೆಚ್ಚಳ ಅಸಾಧ್ಯ !
ಅಧಿಕ ಉದ್ಯೋಗದ ಅರ್ಥ ಅಧಿಕ ಖರ್ಚು ಮಾಡುವ ಶಕ್ತಿ ಅಧಿಕ ಬೇಡಿಕೆಯ ಕಾರಣದಿಂದ ಉಂಟಾಗುವುದು ಹಣದುಬ್ಬರ. ಈಗ , ಹೇರಳ ಹಣಇರುವ ಜನ ಕೂಡ ವಸ್ತುಗಳನ್ನು ಖರೀದಿಸಲಾರರು!
ಮನಿಕುಮಾರ್ ಕೂಡ ಈಗ ಚಿಂತೆ ಮಾಡತೊಡಗಿದ್ದಾನೆ...ಆದರೂ ವಿದ್ಯಾರ್ಥಿಗಳು ಅವನನ್ನು ಕರೆಯ ಬಹುದೇನೋ ಎಂದು ಕಾಯುತ್ತಿದ್ದಾನೆ.


ಈ ಮನಿಕುಮಾರ್ ಅವರನ್ನು ವಾಸ್ತವಕ್ಕೆ ಕೊಂಡೊಯ್ಯುತ್ತಿದ್ದಾನೆ.
ಈಗ ನೀವೇ ನೋಡಿ ನಾವು ಆರ್‌ಬಿಐಯಲ್ಲಿ ಸಾಕಷ್ಟು ಕೆಲಸ ಮಾಡುತ್ತೇವೆ. ಬಹುಶಃ ನೀವು ನೇರವಾಗಿ ನಮ್ಮ ಜೊತೆ ವ್ಯವಹರಿಸದಿರಬಹುದು; ಆದರೆ ನಾವು ನಿಮ್ಮ ಜೊತೆ ಸದಾಕಾಲವೂ ವ್ಯವಹರಿಸುತ್ತಿರುತ್ತೇವೆ ? ಸದಾಕಾಲವೂ.
ನಮ್ಮ ಯೋಜನೆಗಳು ನಿಮ್ಮ ಜೀವನದ ಪ್ರತಿಯೊಂದು ಹಂತದಲ್ಲೂ ನಿಮ್ಮ ಮೇಲೆ ಪ್ರಭಾವ ಬೀರಿಯೇ ಬೀರುತ್ತವೆ. ಬಹಳಷ್ಟು ಮಂದಿಗೆ ಸಾಮಾನ್ಯವಾಗಿ ಇದು ತಿಳಿದಿರುವುದೇ ಇಲ್ಲ. ಆರ್‌ಬಿಐಯ ಪಾತ್ರವನ್ನು ನೀವು ಈಗ ಶ್ಲಾಘಿಸುತ್ತೀರಿ ಎಂದು ನಾನು ಆಶಿಸುತ್ತೇನೆ.


ಮನಿಕುಮಾರನನ್ನು ಕರೆಯಬೇಕೆಂದು ವಿದ್ಯಾರ್ಥಿಗಳು ನಿರ್ಧರಿಸುತ್ತಾರೆ.
ಸ್ಥಗಿತಗೊಂಡ ಬೆಳವಣಿಗೆ !!
ಅತಿಯಾದ ನಿರುದ್ಯೋಗ !!
ಮನಿಕುಮಾರ್!
ತ್ಚ,ತ್ಚ ತ್ಚ.....ಬಹಳಷ್ಟು ತೊಂದರೆಗಳನ್ನು ನೀವು ಆಹ್ವಾನಿಸಿಕೊಂಡಿದ್ದೀರಿ ಎಂದು ನನಗೆ ಅನಿಸುತ್ತಿದೆ.
ನೀನು ಏನಾದರೂ ಮಾಡಬಹುದು ಎಂದು ನನಗೆ ಖಾತ್ರಿಯಿದೆ
ವಿಷಯಗಳನ್ನು ಬಹು ಬೇಗ ವ್ಯವಸ್ಥಿತಗೊಳಿಸುವುದು ನನಗೂ ಸಾಧ್ಯವಾಗದಿರಬಹುದು ಆರ್ಥಿಕ ಸ್ಥಿತಿ ಹಿಂದೆ ಇದ್ದ ಪರಿಸ್ಥಿತಿಗೆ ಬರಲು ಬಹಳಷ್ಟು ಸಮಯ ಬೇಕಾದೀತು. ಈ ನಡುವೆ ಉಂಟಾಗಬಹುದಾದ ಹಾನಿ ಅಪಾರ ... ಓ, ದೇವರೇ ಇದು ನಿಜವಾದ ಜಗತ್ತು ಅಲ್ಲ
ಬನ್ನಿ ನಾವೆಲ್ಲರೂ ವಾಸ್ತವಕ್ಕೆ ಹಿಂತಿರುಗೋಣ ಅಲ್ಲಿ ಆರ್‌ಬಿಐ ಪ್ರತಿಯೊಂದು ವಿಷಯದ ಮೇಲೆ ಹದ್ದಿನ ಕಣ್ಣಿರಿಸುತ್ತದೆ!



ರಾಹುಲ್, ಟೀನಾ ಮತ್ತು ಅರುಣ್ ತಮ್ಮ ಹಣದಿಂದ ತುಂಬಿದ ಚೀಲದ ಜೊತೆ ಕನಸಿನ ಲೋಕದಲ್ಲಿದ್ದಾರೆ!
ಇದು ಬಹಳ ಭಾರವಾಗಿದೆ. ಇದನ್ನು ಬ್ಯಾಂಕಿನಲ್ಲಿ ಇಡುವುದು ಒಳ್ಳೆಯದು ಎಂದು ನಾನು ಯೋಚಿಸುತ್ತಿದ್ದೇನೆ.
ಈಗ ಟೀನಾ ತನ್ನ ಹಣವನ್ನು ಬ್ಯಾಂಕಿನಲ್ಲಿ ಇಡುತ್ತಾಳೆ.
ರಾಹುಲ್‌ಗೆ ಸೊಗಸಾದ ಮೊಪೆಡ್,ಕಣ್ಣಿಗೆ ಬೀಳುತ್ತದೆ.
ಅವನು ಅದನ್ನು ಖರೀದಿಸಬಯಸುತ್ತಾನೆ. ಆದರೆ ಅವನಿಗೆ ಹಣ ಕಡಿಮೆ ಬೀಳುತ್ತದೆ.
ಆಗ ಅವನು ಬ್ಯಾಂಕಿನೆಡೆಗೆ ಹೋಗುತ್ತಾನೆ.
ಒಂದು ಮೊಪೆಡ್ ಖರೀದಿಸುವುದಕ್ಕಾಗಿ ನನಗೆ ಸ್ವಲ್ಪ ಸಾಲದ ಅಗತ್ಯವಿದೆ.




ನಾನು ಈಗ ಹಣಕಾಸಿನ ಯೋಜನೆ– ಆರ್ಥಿಕ ಸ್ಥಿರತೆಗಳು ಮೂರನೇಯ ಸ್ತಂಭದ ಬಗ್ಗೆ ನಿಮಗೆ ವಿವರಿಸಿ ಹೇಳುತ್ತೇನೆ.
ಆದರೆ ಅದಕ್ಕೂ ಸಾಮಾನ್ಯ ಜನರಿಗೂ ಸಂಬಂಧವೇ ಇರುವುದಿಲ್ಲ. ಅದು ಅಷ್ಟು ಮಹತ್ವದ್ದಲ್ಲ ಎಂದು ನನಗೆ ಖಾತ್ರಿಯಿದೆ.
ಅಧ್ಯಾಪಕರು ಮತ್ತೊಮ್ಮೆ ಪ್ರಯತ್ನಿಸುತ್ತಾರೆ, ಆದರೆ ವಿದ್ಯಾರ್ಥಿಗಳಿಗೆ ಅದು ಏನೇನೂ ತಿಳಿಯುವುದಿಲ್ಲ.
ಮನಿಕುಮಾರ್, ನೀವು ಯಾಕೆ ಇದನ್ನು ವಿವರಿಸಿ ಹೇಳುವುದಿಲ್ಲ ?
ಹೂಂ.... ಅಂದರೆ ನೀವು ಒಂದು ಪಿಕ್‌ನಿಕ್‌ಗೆ ಹೋಗಬಯಸುತ್ತೀರಿ, ಸರಿತಾನೇ ?
ಸರಿ...ನೀವು ಒಂದು ಪಿಕ್‌ನಿಕ್‌ಗೆ ಹೋಗಿ ಮತ್ತು ನಾನು ಕೂಡ ರಜೆ ತೆಗೆದುಕೊಳ್ಳುತ್ತೇನೆ.
ಅದ್ಭುತ !
ಹೌದು!
ಹೌದು ಖಂಡಿತ ! ರಜಾದಿನಗಳ ನಿಮ್ಮ ಹೊಸ ಜಗತ್ತನ್ನು ನೋಡೋಣ.
ಮನಿಕುಮಾರ್ ಚೀಲ ತುಂಬಾ ಹಣ ಅವರಿಗೆ ಕೊಡುತ್ತಾನೆ ಮತ್ತು ಇನ್ನೊಂದು ಜಗತ್ತಿಗೆ ಅವರನ್ನು ಕಳುಹಿಸಿ ಕೊಡುತ್ತಾನೆ.


ಮತ್ತು ಅವಳು ಒಬ್ಬಳೇ ಅಲ್ಲ...
ನಾನು ನನ್ನ ಜೀವನದ ಗಳಿಕೆಯ ಎಲ್ಲಾ ಉಳಿತಾಯವನ್ನು ಈ ಬ್ಯಾಂಕ್ ನಲ್ಲಿ ಠೇವಣಿ ಇರಿಸಿದೆ, ಈಗ ನನ್ನ ಹಣ ಮರಳಿ ಸಿಗುತ್ತಿಲ್ಲ.
ನನ್ನ ಮಕ್ಕಳಿಗೆ ನಾನು ಈಗ ಶಿಕ್ಷಣ ಕೊಡಿಸುವುದು ಹೇಗೆ ?
ಈಗ ನನ್ನ ಉಳಿತಾಯದ ಹಣ ಮರಳಿ ಸಿಗದೇ ಇದ್ದರೆ, ನನ್ನ ಹೆಂಡತಿಯ ಆಪರೇಶನ್ ಮಾಡಿಸುವುದು ಹೇಗೆ ?
ಬ್ಯಾಂಕ್ ಮ್ಯಾನೇಜರ್ ನೀಡಿದ ಸಾಲವನ್ನು ವಸೂಲಿ ಮಾಡುವಲ್ಲಿ ಬ್ಯಾಂಕ್ ವಿಫಲವಾಗಿದೆ.
ಠೇವಣಿಯಿಡಲು ಬಂದಿರುವ ಜನರು ವಿಶ್ವಾಸಕಳೆದುಕೊಳ್ಳುತಾರೆ.
ನಾನು ನನ್ನ ಹಣ ಇಲ್ಲಿ ಯಾಕಿರಿಸಬೇಕು ! ನಾನು ಅದನ್ನು ಕಳೆದುಕೊಳ್ಳಲೂ ಬಹುದು !
ಟೀನಾಳಿಗೆ ಅಸಹಾಯಕತೆಯ ಅನುಭವ ಆಗುತ್ತದೆ.
ಈ ನಡುವೆ
ಇದು ಅರುಣ್ ! ನೀನು ಕೂಡ ಒಂದು ಖರೀದಿಸಬೇಕು
ಹೇಯ್, ಗ್ರೇಟ್ ಮೊಪೆಡ್ !


ಇಗೊ ಇಲ್ಲಿ, ಬಡ್ಡಿಯ ಜೊತೆ ಪಾವತಿಸಿರಿ.
ಬ್ಯಾಂಕ್ ಮೆನೇಜರ್ ಟೀನಾಳ ಹಣವನ್ನು ರಾಹುಲ್‌ಗೆ ಕೊಡುತ್ತಾನೆ...
ಅವನು ಮೊಪೆಡ್ ಖರೀದಿಸಲು ಹಣ ಉಪಯೋಗಿಸುತ್ತಾನೆ.
ಒಂದು ವಾರದ ನಂತರ...
ಏಯ್ ಸುಂದರವಾದ ಮೊಪೆಡ್ ರಾಹುಲ್ ! ಏಯ್,
ಈಗ ಟೀನಾ ತನ್ನ ಹಣಕ್ಕಾಗಿ ಮರಳಿ ಬರುತ್ತಾಳೆ
ನನ್ನ ಹಣ ಮರಳಿ ಪಡೆಯಲಿಕ್ಕಿದೆ.
ಆದರೆ ನಿನ್ನ ಹಣವನ್ನು ನಾನು ಬೇರೆಯವರಿಗೆ ಕೊಟ್ಟಿದ್ದೇನೆ.
ಈಗ ನನ್ನ ಬಳಿ ಏನೂ ಇಲ್ಲ.. ಹೌದು ! ನೀನೊಂದು ಉಪಕರಣ ಖರೀದಿಸಬೇಕು. ಏಯ್, ನೀನೂ ಒಂದು ಮೊಪೆಡ್ ಖರೀದಿಸು.
... ಮತ್ತು ಮನೀಕುಮಾರ್, ನಮ್ಮ ಬಳಿ ಹಣ ಇಲ್ಲದೇ ಇದ್ದಾಗ ಅದನ್ನು ಪೂರೈಸುವವನು, ಈಗ ರಜೆಯಲ್ಲಿದ್ದಾನೆ.
ಟೀನಾಳಿಗೆ ನಿರಾಶೆಯಾಯಿತು !


ಅರುಣ್ ಸಾಲಕ್ಕಾಗಿ ಇನ್ನೊಂದು ಬ್ಯಾಂಕನ್ನು ಸಂಪರ್ಕಿಸುತ್ತಾನೆ.
ಒಂದು ಮೊಪೆಡ್ ಖರೀದಿಸಲು ನನಗೆ ಸ್ವಲ್ಪ ಸಾಲ ಬೇಕು.
ನನ್ನನ್ನು ಕ್ಷಮಿಸಿ ! ನಮ್ಮ ಬಳಿ ಹಣ ಇಲ್ಲ. ನಾನು ನಿರೀಕ್ಷಿಸಿದ್ದ ಹಣವನ್ನು ಸಾಲಗರರು ಹಿಂತಿರುಗಿಸಿಲ್ಲ. ಇಂತಹ ಸಂದರ್ಭದಲ್ಲಿ ಹಣ ಒದಗಿಸುವ ಮನೀಕುಮಾರ್ ಕೂಡ ರಜೆಯಲ್ಲಿದ್ದಾರೆ.
ಅರುಣ್ ನಿರಾಶನಾಗಿದ್ದಾನೆ.
ಹೀಗೆ ಸಾಲ ದೊರಕದೇ ಇದ್ದವನು ಅವನೊಬ್ಬನೇ ಅಲ್ಲ.
BANK
ನನ್ನ ಮಗಳ ಮದುವೆ ನಾನು ಹೇಗೆ ಮಾಡುವುದು ?
ಮನೆ ಖರೀದಿ ಸಲು ನನಗೆ ಹಣ ಬೇಕು. ಈಗ ಅದನ್ನು ಹೇಗೆ ಖರೀದಿಸುವುದು ?
ಈ ಗದ್ದಲದ ನಡುವೆ ರಾಹುಲ್, ಟೀನಾ ಮತ್ತು ಅರುಣ್ ಪರಸ್ಪರ ಭೇಟಿಯಾದರು.
ಕೇವಲ ಮನಿಕುಮಾರ್ ಇದರ ಪರಿಹಾರ ಮಾಡಬಹುದು.
ಮನಿಕುಮಾರ್ !!!



ನನ್ನ ರಜಾದಿನಗಳ ಘೋರ ಪರಿಣಾಮ ಬೀರಲಿವೆ ಅನಿಸುತ್ತಿದೆ.
ಮನಿಕುಮಾರ್, ಈ ಬ್ಯಾಂಕ್‌ಗಳಿಗೆ ಏನಾಗಿದೆ ಎಂದೇ ನನಗೆ ಅರ್ಥವಾಗೋದಿಲ್ಲ, ಏನು ನಡೆಯುತ್ತಿದೆ ಇಲ್ಲಿ? ಈ ಬಗ್ಗೆ ನೀನು ಏನಾದರೂ ಮಾಡಬಹುದೇ?
ಖಂಡಿತ, ನಾನು ಮಾಡಬಲ್ಲೆ!
ಅವನು ಅವರನ್ನು ಕಂಟ್ರೋಲ್ ರೂಮ್‌ಗೆ ಕರೆದು ಕೊಂಡುಹೋಗುತ್ತಾನೆ.
ಅವನು ಕ್ಯಾಪಿಟಲ್ ಗುಂಡಿಯನ್ನು ಒತ್ತುತ್ತಾನೆ ಮತ್ತು ಆರ್‌ಬಿಐಯಿಂದ ಬ್ಯಾಂಕ್‌ಗಳಿಗೆ ಹಣ ಹರಿದು ಬರುತ್ತದೆ.
RBI BANK
BANK
ನಂತರ ಅವನು ಕೆಲವು ಮಹತ್ವದ ಕರೆಗಳನ್ನು ಮಾಡುತ್ತಾನೆ.
?
?
?
ದಯವಿಟ್ಟು ಕೆಲಸ ಆರಂಭಿಸಿ... ಸಂಭಾವ್ಯ ನಷ್ಟ ಮಾಪನ... ಪ್ರುಡೆನ್ಶಿಯಲ್ ನಾರ್ಮ್ಸ್... ಕೆಪಿಟಲ್ ಆಡೆಕ್ವೆಸಿ... ರಿಕವರ್ ನಾನ್ – ಫರ್ಫಾರ್ಮಿಂಗ್ ಲೋನ್ಸ್...


ಬ್ಯಾಂಕ್ ಮ್ಯಾನೇಜರ ಒಪ್ಪಿಗೆ ಸೂಚಿಸುತ್ತ ತಲೆಯಾಡಿಸುತ್ತಾನೆ.
ಮತ್ತು ನಿಧಾನವಾಗಿ, ಬ್ಯಾಂಕ್ ಮತ್ತೆ ಆರೋಗ್ಯಕರವಾಗುತ್ತದೆ.
BANK OF
ಗ್ರಾಹಕರು ಬ್ಯಾಂಕ್‌ಗಳಲ್ಲಿ ತುಂಬಿಕೊಂಡಿದ್ದಾರೆ, ಕೆಲವರು ಠೇವಣಿ ಇಡುತ್ತಾರೆ. ಕೆಲವರು ಸಾಲ ಪಡೆಯುತ್ತಾರೆ.
ಠೇವಣಿ ವಿಮೆ
BANK
ನಂತರ ಮನಿಕುಮಾರ್, 'ಬ್ಯಾಂಕ್‌ಗಳ ಮೇಲಿನ ಠೇವಣಿ ವಿಮೆ' ಎಂದು ಕರೆಯಲ್ಪಡುವ ದೊಡ್ಡ ಸಂರಕ್ಷಕ ಕೊಡೆಯನ್ನು ಬಿಚ್ಚಿ ಹಿಡಿಯುತ್ತಾನೆ.


ಅಂತಿಮವಾಗಿ, ವಿಷಯಗಳು ಸಾಮಾನ್ಯ ಸ್ಥಿತಿಗೆ ಮರಳಿದವು.
ಈಗ. ನೋಡಿ, ಬ್ಯಾಂಕ್‌ಗಳು ಸುರಕ್ಷಿತವಾಗಿರದಿದ್ದರೆ, ಜನರು ತಮ್ಮ ಹಣವನ್ನು ಅಲ್ಲಿ ಇಡಲಾರರು. ಒಮ್ಮೆ/ಒಂದುಸಲ ಹೀಗಾದರೆ, ವಸ್ತುಗಳ ಉತ್ಪಾದನೆಗಾಗಿ ಇತರ ಜನರಿಗೆ ಕೊಡಲು ಬ್ಯಾಂಕಿನ ಬಳಿ ಹಣ ಇರಲಾರದು. ಒಂದು ವೇಳೆ ಹಾಗಾದರೆ, ಅಭಿವೃದ್ಧಿ ಮಾತು ಹಾಗಿರಲಿ, ಆರ್ಥಿಕ ಸ್ಥಿತಿ ಮುನ್ನಡೆ ಹೇಗೆ ಸಾಧ್ಯ? ಆದಕಾರಣ. ಇದರ ಬೆನ್ನೆಲಬಾಗಿ ನಾನು ನಿಲ್ಲಬೇಕಿದೆ ಮತ್ತು ಬ್ಯಾಂಕ್‌ಗಳು ಉತ್ತಮ ಕಾರ್ಯಾಚರಣೆ ಮಾಡುತಿವಂತೆ ಖಚಿತ ಪಡಿಸಿಕೊಳ್ಳಬೇಕಾಗಿದೆ.
ಈಗ, ನಮಗೆ ಅರ್ಥವಾಯಿತು ಬಿಡು ! ಬ್ಯಾಂಕ್‌ಗಳು ಚೆನ್ನಾಗಿ ಕಾರ್ಯಾಚರಣೆ ಮಾಡುತ್ತಿವೆ ಎಂದು ಖಚಿತ ಪಡಿಸಿಕೊಂಡು, ಹೆಚ್ಚು ಹಣ ಇರುವವರಿಂದ ಅದನ್ನು ಪಡೆದುಕೊಂಡು, ಆದರ ಅಗತ್ಯವಿರುವವರಿಗೆ ಒದಗಿಸುವ ಸಹಾಯ ನೀವು ಮಾಡುತ್ತೀರಿ. ಅವರು ಅದನ್ನು ಹಿಂತಿರುಗಿಸಿದಾಗ, ಅಗತ್ಯವಿರುವ ಬೇರೆಯವರಿಗೆ ಅದನ್ನು ಪೂರೈಸುವಿರಿ ಮತ್ತು ಹೀಗೇ ಅದು ಮುಂದುವರಿಯುತ್ತಿರುತ್ತದೆ.
ಸ್ಪಷ್ಟವಾಗಿ ಹೇಳಬೇಕೆಂದರೆ, ಜನರು ಬ್ಯಾಂಕ್‌ಗಳ ಮೇಲೆ ಭರವಸೆಯಿರಿಸಿ, ತಮ್ಮ ಹಣವನ್ನು ಅಲ್ಲಿ ವಿನಿಯೋಜಿಸಿದಾಗ ಮಾತ್ರ ಇದು ಸಾಧ್ಯವಾಗುವುದು, ಅದು ನಿಮಗೆ ಆರ್ಥಿಕ ಸ್ಥಿರತೆಯನ್ನು ಒದಗಿಸುವುದು.
ಅದ್ಭುತ ! ಹಾಗಾದರೆ... ಮುಂದೇನು ?

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA

**ಗ್ರಂಥಸ್ವಾಮ್ಯ**
ಮೂಲದ ಉಲ್ಲೇಖ ಮಾಡಿ ಮಾತ್ರ ಮರುನಿರ್ಮಾಣ ಮಾಡಲು ಅನುಮತಿಯಿದೆ.

**ಹೊಣೆ ನಿರಾಕರಣೆ**
ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸಿನ ಶಿಕ್ಷಣ ಪ್ರಯತ್ನವು ಜನ ಸಾಮಾನ್ಯರಿಗೆ ಸಾಮಾನ್ಯ ಮಾಹಿತಿ ಮತ್ತು ಮಾರ್ಗದರ್ಶನವನ್ನು ಒದಗಿಸುವುದು ಆಗಿದೆ. ಈ ಮಾಹಿತಿಯನ್ನು ಉಪಯೋಗ ಮಾಡಿಕೊಳ್ಳುವವರು ಉಪಲಬ್ದಗೊಳಿಸಲಾದ ಮಾಹಿತಿಯ ಉಪಯೋಗ ಮಾಡಿಕೊಳ್ಳುವ ಸಮಯದಲ್ಲಿ ಸ್ವತ: ಜಾಗ್ರತೆವಹಿಸಬೇಕು ಮತ್ತು ನ್ಯಾಯಯುತ ನಿರ್ಣಯ ತೆಗೆದುಕೊಳ್ಳಬೇಕು.